# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೦, ಏಪ್ರಿಲ್, ೨೦೨೬ (ಚೈತ್ರ, ೨೦, ಶಕವರ್ಷ, ೧೯೪೮)<br>BENGALURU, FRIDAY, 10, APRIL, 2026 (CHAITHRA, 20, SHAKAVARSHA, 1948) | ನಂ. ೨೭೩<br>No. 273 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 05 SHASANA 2026, BENGALURU, DATED:10.04.2026**

The Karnataka Municipalities and Certain Other Law (Amendment) Act, 2026 ಇದಕ್ಕೆ 2026ರ ಏಪ್ರಿಲ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 28 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

# KARNATAKA ACT 28 OF 2026

(First published in the Karnataka Gazette Extra-ordinary on the 10th day of April, 2026)

## THE KARNATAKA MUNICIPALITIES AND CERTAIN OTHER LAW (AMENDMENT) ACT, 2026

(Received the assent of the Governor on the 9th day of April, 2026)

An Act further to amend the Karnataka Municipalities Act, 1964 and the Karnataka Municipal Corporations Act, 1976.

Whereas it is expedient further to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy seventh year of the Republic of India as follows, namely:-

**1. Short title and commencement.-** (1) This Act may be called the Karnataka Municipalities and Certain Other Law (Amendment) Act, 2026.

(2) It shall come into force at once.

**2. Amendment of Karnataka Act 22 of 1964.-** In the Karnataka Municipalities Act, 1964 (Karnataka Act 22 of 1964),-

(1) in section 94,-

(i) in sub-section (1), in clause (b), sub-clause (xiii) and the entries relating thereto shall be omitted; and

(ii) sub-section (1-B), shall be omitted.

(2) after section 132, the following shall be inserted, namely:-

**"132-A. Fee on advertisement.-** Every person who erects, exhibits, fixes or retains, upon or over any land, building, wall or structure, any advertisement or who displays any advertisement to public view in any manner whatsoever, in any place whether public or private, shall pay on every advertisement which is so erected, exhibited, fixed, retained or displayed to public view, an advertisement fee calculated at such rates and in such manner and subject to such exemptions, as the municipal council may, by resolution determine:

Provided that, the rates shall be subject to the maximum and minimum laid down by the Government in this behalf.

Provided further that, no fee shall be levied under this section on any advertisement or a notice of,-

(a) a public meeting of municipalities; or

(b) an election to any legislative body; or

(c) a candidature in respect of such an election.

Provided also that, such other exemptions from advertisement fee may be granted as approved by the Government and notified under the rules."

(3) for section 133, the following shall be substituted, namely:-

**"133. Prohibition of advertisements without written permission of municipal council.-** (1) No advertisement shall, after the levy of the fee under section 132-A which has been determined upon by the municipal council, be erected, exhibited, fixed or retained upon or over any land, building, wall, hoarding or structure within the municipal area or shall be displayed in any manner whatsoever in any place without the written permission of the municipal council.

(2) The municipal council shall not grant such permission if,-

(i) the advertisement contravenes any bye-law made by the municipal council; or

(ii) the fee, if any, due in respect of the advertisement has not been paid.

(3) Subject to the provisions of sub-section (2), in the case of an advertisement liable to the advertisement fee, the municipal council shall grant permission for the period to which the payment of the fee relates."

(4) for section 136, the following shall be substituted, namely:-

**"136. Removal and demolition of unauthorised advertisement.-** If any advertisement be erected, exhibited, fixed or retained contrary to the provisions of section 133 or after the written permission for the erection, exhibition, fixation or retention thereof for any period which has expired or become void, the Municipal Commissioner or Chief officer may, by notice in writing, require the owner or the occupier of the land, property, building, wall, hoarding or structure upon or over which the same is erected, exhibited, fixed or retained, to take down or remove such advertisement or may enter any building, land or property and have the advertisement removed or demolished:

Provided that, in case of advertisement that is liable to pay advertisement fee and/or penalty, whether authorized or unauthorized, but delays to pay the same, he shall be liable to pay, in addition to the fee and/or penalty, an interest thereon at a rate of eighteen percent per annum calculated from the date of advertisement fee or penalty becoming due until the date of payment thereof.

Provided further that, any unauthorized advertisement shall be liable to pay a penalty and also a fine as may be prescribed. The said payment of penalty or the fine shall not entitle the unauthorized advertisement to continue and the same shall be summarily removed or demolished.

Provided also that, the fine on unauthorized advertisements or displays may be recovered on the spot in such manner as may be prescribed.

Provided also that, any dues, as per prescribed advertisement fee, may be assessed, demand and show cause notice thereon issued and recoveries made,

mutatis-mutandis in the manner provided for issuance of show cause notice, demand notice and the recovery of dues for the property tax under this Act.

Provided also that, for unauthorized advertisements, the cost of removal thereof, in addition to other provisions, may be recovered by the seizure and sale of the unauthorized advertisement materials or in the manner provided for recovery of the dues of the property tax."

(5) in section 142, in sub-section (1), in clause (b), in the first proviso, the entry (iv) shall be omitted.

(6) in section 324, in sub-section (1), for clause (ff), the following shall be substituted, namely:-

"(ff) prescribing the conditions subject to which permission may be granted, renewed, refused, suspended or withdrawn, for erecting, exhibiting, fixing or retaining any advertisement liable to fee under this Act, over any land, building or structure or upon or in any vehicle or for displaying in any other manner;"

(7) Schedule VII and the entries relating thereto shall be omitted.

**3. Amendment of Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977),-

(1) in section 103, in clause (b), sub-clause (vi) shall be omitted.

(2) for section 134, the following shall be substituted, namely,-

"**134. Fee on advertisement**.- Every person who erects, exhibits, fixes or retains, upon or over any land, building, wall or structure any advertisement or who displays any advertisement to public view in any manner whatsoever, in any place whether public or private, shall pay on every advertisement which is so erected, exhibited, fixed, retained or displayed to public view, an advertisement fee calculated at such rates and in such manner and subject to such exemptions, as the Corporation may, by resolution determine:

Provided that, the rates shall be subject to the maximum and minimum laid down by the Government in this behalf.

Provided further that, no fee shall be levied under this section on any advertisement or a notice of,-

(a) a public meeting or of the City Corporation; or

(b) an election to any legislative body; or

(c) a candidature in respect of such an election.

Provided also that, such other exemptions from advertisement fee may be granted as approved by the Government and notified under the rules.”

(3) for section 135, the following shall be substituted, namely:-

“**135. Prohibition of advertisements without written permission of Commissioner**.- (1) No advertisement shall, after the levy of the fee under section 134 which has been determined upon by the Corporation, be erected, exhibited, fixed or retained upon or over any land, building, wall, hoarding or structure within the municipal area or shall be displayed in any manner whatsoever in any place, without the written permission of the Commissioner.

(2) The Commissioner shall not grant such permission if,-

(i) the advertisement contravenes any bye-law made by the Corporation; or

(ii) the fee, if any, due in respect of the advertisement, has not been paid.

(3) Subject to the provisions of sub-section (2), in the case of an advertisement liable to the advertisement fee, the Commissioner shall grant permission for the period to which the payment of the fee relates.”

(4) for section 138, the following shall be substituted, namely:-

**“138. Removal and demolition of unauthorised advertisement.-** If any advertisement be erected, exhibited, fixed or retained contrary to the provisions of sections 134 and 135, or after the written permission for the erection, exhibition, fixation or retention thereof for any period which has expired or become void, the Commissioner may, by notice in writing, require the owner or the occupier of the land, property, building, wall, hoarding or structure upon or over which the same is erected, exhibited, fixed or retained, to take down or remove such advertisement or may enter any building, land or property and have the advertisement removed or demolished:

Provided that, in case of advertisement that is liable to pay advertisement fee and/or penalty, whether authorized or unauthorized, but delays to pay the same, he shall be liable to pay, in addition to the fee and/or penalty, an interest thereon

at a rate of eighteen percent per annum calculated from the date of advertisement fee or penalty becoming due until the date of payment thereof.

Provided further that, any unauthorized advertisement shall be liable to pay a penalty and also a fine as may be prescribed. The said payment of penalty or the fine shall not entitle the unauthorized advertisement to continue and the same shall be summarily removed or demolished.

Provided also that, the fine on unauthorized advertisements or displays may be recovered on the spot in such manner as may be prescribed.

Provided also that, any dues as per prescribed advertisement fees may be assessed, demand and show cause notice thereon issued and recovery made, mutatis mutandis, in the manner provided for issuance of show cause notice, demand notice and the recovery of dues for the property tax under this Act.

Provided also that, for unauthorized advertisements the cost of removal thereof, in addition to other provisions, may be recovered by the seizure and sale of the unauthorized advertisement materials or in the manner provided for recovery of the dues of the property tax."

(5) section 139 shall be omitted.

(6) Schedule VIII and the entries relating thereto shall be omitted.

**4. Validation of Levy and collection of tax, cess, fee etc**.- Notwithstanding anything contained in any judgment, decree or order of any Court, Tribunal or other authority to the contrary levy, assessment or collection of any amount as tax, cess, fee etc. on building, vacant plot etc., tax, cess, fee etc. made or purporting to have been made and any action or thing taken or done (including any notices or orders issued or assessment made) and all proceedings held and any levy and collection of tax, cess, fee etc. purported to have been collected by way of tax, cess, fee etc. in relation to such levy, assessment or collection under the provisions of the Principal Acts or any rules, notification, order, guidelines or letters before the commencement of the Karnataka Municipalities and Certain Other Law (Amendment) Act, 2026 shall be and shall deemed to be valid and effective for all purposes as if such levy, assessment or collection or action or thing had been made, taken or done under the Principal Acts as amended by the Karnataka Municipalities and Certain Other Law (Amendment) Act, 2026 and accordingly,-

(a) All acts, proceedings or things done or any action taken by the Government or the officers of the Municipality or Corporation, as the case may be, in connection with the levy, assessment or collection of any amount as fee for all purposes be deemed to be and to have always been made, done or taken in accordance with law;

(b) No suit or other proceeding shall be maintained or continued in any Court or Tribunal or before any authority for the refund of any such fee; and

(c) No Court shall enforce any decree or order directing the refund of any such fee.

By Order and in the name of
the Governor of Karnataka,

**G. Sridhar**
Secretary to Government
Department of Parliamentary Affairs
and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 05 ಶಾಸನ 2026, ಬೆಂಗಳೂರು, ದಿನಾಂಕ:10.04.2026**

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 (2023 ರ ಕರ್ನಾಟಕ ಅಧಿನಿಯಮ 13) ರ ಪ್ರಕರಣ 6ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Municipalities and Certain Other Law (Amendment) Act, 2026 (Karnataka Act 28 of 2026)ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ (**ಭಾಗ** IV-A)ರಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 28**

**(2026 ರ ಏಪ್ರಿಲ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026**

**(2026 ರ ಏಪ್ರಿಲ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)**

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರ ಪಾಲಿಕೆಗಳ

ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ,-

(1) 94ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (1)ರ ಖಂಡ (ಬಿ)ರಲ್ಲಿನ ಉಪಖಂಡ (xiii) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) ಉಪಪ್ರಕರಣ (1ಬಿ)ಯನ್ನು ಬಿಟ್ಟುಬಿಡತಕ್ಕದ್ದು.

(2) 132ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

**"132ಎ. ಜಾಹಿರಾತಿನ ಮೇಲೆ ಶುಲ್ಕ.-** ಯಾವು ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಟ್ಟಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಯಾವುದೇ ಜಾಹಿರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಇಟ್ಟಿರುವ, ಪ್ರದರ್ಶಿಸಿದ, ಅಳವಡಿಸಿದ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹಿರಾತಿನ ಮೇಲೆ, ಪೌರ ಪಾಲಿಕೆ(municipal council) ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಲೆಕ್ಕ ಹಾಕಿದಂಥ ದರಗಳಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ವಿನಾಯಿತಿಗಳಿಗೊಳಪಟ್ಟು ಶುಲ್ಕವನ್ನು ಪಾವತಿ ಮಾಡತಕ್ಕದ್ದು:

ಪರಂತು, ಆ ದರಗಳು ಯಾವಾಗಲೂ ಈ ಕುರಿತು ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ಮುನ್ಸಿಪಾಲಿಟಿಗಳ; ಅಥವಾ

(ಬಿ) ಯಾವುದೇ ಶಾಸನಾತ್ಮಕ ಸಂಸ್ಥೆಯ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ,

- ಯಾವುದೇ ಜಾಹಿರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದಡಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ:

ಅಲ್ಲದೆ ಪರಂತು ಸರ್ಕಾರವು ಅನುಮೋದಿಸಿದಂತೆ ಮತ್ತು ಅಧಿಸೂಚಿತ ನಿಯಮಗಳಡಿ ಜಾಹಿರಾತು ಶುಲ್ಕದಿಂದ ಅಂಥ ಇತರ ವಿನಾಯಿತಿಗಳನ್ನು ನೀಡಬಹುದು."

(3) ಪ್ರಕರಣ 133ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"133. ಪೌರ ಪಾಲಿಕೆಯ ಲಿಖಿತ ಅನುಮತಿಯಿಲ್ಲದ ಜಾಹಿರಾತುಗಳ ನಿಷೇಧ.-** (1) 132ಎ ಪ್ರಕರಣದಡಿ ಶುಲ್ಕ ವಿಧಿಸುವುದನ್ನು ಪೌರ ಪಾಲಿಕೆಯು ನಿರ್ಧರಿಸಿದ ತರುವಾಯ ಪೌರ ಪಾಲಿಕೆಯ ಲಿಖಿತ ಅನುಮತಿ ಇಲ್ಲದೆ ಪೌರ ಪ್ರದೇಶದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಪೌರ ಪಾಲಿಕೆಯು,-

(i) ಪೌರ ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಜಾಹಿರಾತು ಉಲ್ಲಂಘಿಸಿದರೆ; ಅಥವಾ

(ii) ಜಾಹಿರಾತಿಗೆ ಸಂಬಂಧಿಸಿದಂತೆ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವತಿ ಮಾಡಿಲ್ಲದಿದ್ದರೆ,

- ಅಂಥ ಅನುಮತಿಯನ್ನು ನೀಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹಿರಾತು ಶುಲ್ಕಕ್ಕೆ ಹೊಣೆಯಾಗಬಹುದಾದ ಜಾಹಿರಾತಿನ ಸಂದರ್ಭದಲ್ಲಿ, ಪೌರ ಪಾಲಿಕೆಯು, ಯಾವ ಅವಧಿಗೆ ಶುಲ್ಕ ಪಾವತಿಯು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ನೀಡತಕ್ಕದ್ದು."

(4) ಪ್ರಕರಣ 136ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"136. ಅನಧಿಕೃತ ಜಾಹಿರಾತನ್ನು ತೆಗೆದುಹಾಕುವುದು ಮತ್ತು ಕೆಡವಿಹಾಕುವುದು.-** ಪ್ರಕರಣ 133ರ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹಿರಾತನ್ನು ಇಡಲು, ಪ್ರದರ್ಶಿಸಲು ಅಳವಡಿಸಲು ಅಥವಾ ಉಳಿಸಿಕೊಳ್ಳಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹಿರಾತನ್ನು ಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಪೌರ ಆಯುಕ್ತ ಅಥವಾ ಮುಖ್ಯಾಧಿಕಾರಿಯು, ಲಿಖಿತ ನೋಟೀಸಿನ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಇಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ ಆ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹಿರಾತನ್ನು ತೆಗೆದುಹಾಕುವಂತೆ ಅಥವಾ ಕೆಡವಿಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹಿರಾತನ್ನು ತೆಗೆದುಹಾಕಿಸಬಹುದು:

ಪರಂತು, ಅಧಿಕೃತ ಅಥವಾ ಅನಧಿಕೃತ ಜಾಹಿರಾತು ಶುಲ್ಕ ಮತ್ತು/ಅಥವಾ ದಂಡವನ್ನು ಪಾವತಿಸಲು ಹೊಣೆಯಾಗಿರುವ ಜಾಹಿರಾತಿನ ಸಂದರ್ಭದಲ್ಲಿ, ಆದರೆ ಅದನ್ನು ಪಾವತಿಸಲು ವಿಳಂಬವಾದರೆ, ಆತನು ಶುಲ್ಕ ಮತ್ತು/ಅಥವಾ ದಂಡದ ಜೊತೆಗೆ ಜಾಹಿರಾತು ಶುಲ್ಕ ಅಥವಾ ದಂಡವು ಬಾಕಿಯಾದ ದಿನಾಂಕದಿಂದ ಅದನ್ನು ಪಾವತಿಸುವ ದಿನಾಂಕದವರೆಗೆ ಲೆಕ್ಕಹಾಕಲಾದಂತೆ ವಾರ್ಷಿಕವಾಗಿ ಶೇಕಡಾ ಹದಿನೆಂಟರಷ್ಟು ಬಡ್ಡಿ ದರದಲ್ಲಿ ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಮತ್ತೂ ಪರಂತು, ನಿಯಮಗಳಲ್ಲಿ ನಿಯಮಿಸಬಹುದಾದಂತೆ ಯಾವುದೇ ಅನಧಿಕೃತ ಜಾಹಿರಾತು, ದಂಡ ಮತ್ತು ಜುಲ್ಮಾನೆಯನ್ನು ಸಹ ಪಾವತಿಸಲು ಹೊಣೆಯಾಗಿರತಕ್ಕದ್ದು. ಸದರಿ ದಂಡ ಅಥವಾ ಜುಲ್ಮಾನೆಯ ಪಾವತಿಯು ಅನಧಿಕೃತ ಜಾಹಿರಾತನ್ನು ಮುಂದುವರೆಸಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ ಹಾಗೂ ಅದನ್ನು ಕ್ಷಿಪ್ರವಾಗಿ ತೆಗೆದುಹಾಕತಕ್ಕದ್ದು ಅಥವಾ ಕೆಡವಿಹಾಕತಕ್ಕದ್ದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳು ಅಥವಾ ಪ್ರದರ್ಶನಗಳ ಮೇಲಿನ ಜುಲ್ಮಾನೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸ್ಥಳದಲ್ಲೇ ವಸೂಲುಮಾಡಬಹುದು.

ಅಲ್ಲದೇ ಪರಂತು, ಈ ಅಧಿನಿಯಮದಡಿಯಲ್ಲಿ ಸ್ವತ್ತು ತೆರಿಗೆಯ ಬಾಕಿಗಾಗಿ ಕಾರಣಕೇಳಿ ನೋಟೀಸನ್ನು, ತಗಾದೆ ನೋಟಿಸನ್ನು ನೀಡಲು ಮತ್ತು ವಸೂಲು ಮಾಡಲು ಉಪಬಂಧಿಸಲಾದ ವಿಧಾನದ ಪ್ರಕಾರ, ಯಥೋಚಿತ ವ್ಯತ್ಯಾಸಗಳೊಂದಿಗೆ ನಿಯಮಿಸಲಾದ ಜಾಹಿರಾತು ಶುಲ್ಕಗಳ ಅನುಸಾರವಾಗಿ ಯಾವುದೇ ಬಾಕಿಗಳನ್ನು ನಿರ್ಧರಿಸಬಹುದು ಹಾಗೂ ಅದರ ಮೇಲೆ ತಗಾದೆ ಮತ್ತು ಕಾರಣ ಕೇಳಿ ನೋಟೀಸನ್ನು ನೀಡಬಹುದು ಮತ್ತು ವಸೂಲಾತಿಗಳನ್ನು ಮಾಡಬಹುದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳಿಗಾಗಿ ಅದರ ತೆಗೆದುಹಾಕುವಿಕೆಯ ವೆಚ್ಚವನ್ನು, ಇತರ ಉಪಬಂಧಗಳೊಂದಿಗೆ, ಅನಧಿಕೃತ ಜಾಹಿರಾತು ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಮತ್ತು ಮಾರಾಟ ಮಾಡುವ ಮೂಲಕ ಅಥವಾ ಸ್ವತ್ತು ತೆರಿಗೆಯ ಬಾಕಿಗಳನ್ನು ವಸೂಲು ಮಾಡಲು ಉಪಬಂಧಿಸಲಾದ ವಿಧಾನದಲ್ಲಿ ವಸೂಲುಮಾಡಬಹುದು."

(5) ಪ್ರಕರಣ 142ರಲ್ಲಿ ಉಪಪ್ರಕರಣ (1)ರಲ್ಲಿನ (ಬಿ) ಖಂಡದಲ್ಲಿರುವ ಮೊದಲನೇ ಪರಂತುಕದ (iv)ನೇ ನಮೂದನ್ನು ಬಿಟ್ಟುಬಿಡತಕ್ಕದ್ದು.

(6) ಪ್ರಕರಣ 324ರಲ್ಲಿ ಉಪಪ್ರಕರಣ (1)ರಲ್ಲಿನ (ಎಫ್‌ಎಫ್) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್ ಎಫ್) ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು ಯಾವುದೇ ಭೂಮಿ, ಕಟ್ಟಡ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಒಳಗೆ ಈ ಅಧಿನಿಯಮದ ಮೇರೆಗೆ ಶುಲ್ಕಕ್ಕೆ ಗುರಿಯಾಗುವ ಯಾವುದೇ ಜಾಹೀರಾತನ್ನು ಇಡಲು, ಪ್ರದರ್ಶಿಸಲು, ಅಳವಡಿಸಿಕೊಳ್ಳಲು ಅಥವಾ ಉಳಿಸಿಕೊಳ್ಳಲು ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರದರ್ಶಿಸುವುದಕ್ಕಾಗಿ ಅನುಮತಿಯನ್ನು ನೀಡಬಹುದೋ, ನವೀಕರಿಸಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳು ನಿಯಮಿಸುವುದಕ್ಕಾಗಿ;"

(7) ಅನುಸೂಚಿ VII ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(1) ಪ್ರಕರಣ 103ರ ಖಂಡ (ಬಿ)ರಲ್ಲಿನ (vi)ನೇ ಉಪ-ಖಂಡವನ್ನು ಬಿಟ್ಟುಬಿಡತಕ್ಕದ್ದು.

(2)ಪ್ರಕರಣ 134ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"134 ಜಾಹಿರಾತಿನ ಮೇಲೆ ಶುಲ್ಕ.-** ಯಾವುದೇ ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಟ್ಟಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಯಾವುದೇ ಜಾಹಿರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಇಟ್ಟಿರುವ, ಪ್ರದರ್ಶಿಸಿದ, ಅಳವಡಿಸಿದ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹಿರಾತಿನ ಮೇಲೆ, ಪಾಲಿಕೆಯ ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಲೆಕ್ಕ ಹಾಕಿದಂಥ ದರಗಳಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ವಿನಾಯಿತಿಗಳಿಗೊಳಪಟ್ಟು ಶುಲ್ಕವನ್ನು ಪಾವತಿ ಮಾಡತಕ್ಕದ್ದು:

ಪರಂತು, ಆ ದರಗಳು ಯಾವಾಗಲೂ ಈ ಕುರಿತು ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ನಗರ ಪಾಲಿಕೆಗಳ; ಅಥವಾ

(ಬಿ) ಯಾವುದೇ ಶಾಸನಾತ್ಮಕ ಸಂಸ್ಥೆಯ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ,

- ಯಾವುದೇ ಜಾಹಿರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದಡಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ:

ಅಲ್ಲದೆ ಪರಂತು ಸರ್ಕಾರವು ಅನುಮೋದಿಸಿದಂತೆ ಮತ್ತು ಅಧಿಸೂಚಿತ ನಿಯಮಗಳಡಿ ಜಾಹಿರಾತು ಶುಲ್ಕದಿಂದ ಅಂಥ ಇತರ ವಿನಾಯಿತಿಗಳನ್ನು ನೀಡಬಹುದು."

(3) ಪ್ರಕರಣ 135ಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"135. ಆಯುಕ್ತನ ಲಿಖಿತ ಅನುಮತಿಯಿಲ್ಲದ ಜಾಹಿರಾತುಗಳ ನಿಷೇಧ.-** (1) 134ನೇ ಪ್ರಕರಣದಡಿ ಶುಲ್ಕ ವಿಧಿಸುವುದನ್ನು ಪಾಲಿಕೆಯು ನಿರ್ಧರಿಸಿದ ತರುವಾಯ ಆಯುಕ್ತನ ಲಿಖಿತ ಅನುಮತಿ ಇಲ್ಲದೆ ಪೌರ ಪ್ರದೇಶದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಆಯುಕ್ತನು,-

(i) ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಜಾಹಿರಾತು ಉಲ್ಲಂಘಿಸಿದರೆ; ಅಥವಾ

(ii) ಜಾಹಿರಾತಿಗೆ ಸಂಬಂಧಿಸಿದಂತೆ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವತಿ ಮಾಡಿಲ್ಲದಿದ್ದರೆ,

- ಅಂಥ ಅನುಮತಿಯನ್ನು ನೀಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹಿರಾತು ಶುಲ್ಕಕ್ಕೆ ಹೊಣೆಯಾಗಬಹುದಾದ ಜಾಹಿರಾತಿನ ಸಂದರ್ಭದಲ್ಲಿ, ಆಯುಕ್ತನು, ಯಾವ ಅವಧಿಗೆ ಶುಲ್ಕ ಪಾವತಿಯು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ನೀಡತಕ್ಕದ್ದು."

(4) ಪ್ರಕರಣ 138ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"138. ಅನಧಿಕೃತ ಜಾಹಿರಾತನ್ನು ತೆಗೆದುಹಾಕುವುದು.-** 134 ಮತ್ತು 135ನೇ ಪ್ರಕರಣಗಳ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹಿರಾತನ್ನು ಇಡಲು, ಪ್ರದರ್ಶಿಸಲು ಅಳವಡಿಸಲು ಅಥವಾ ಉಳಿಸಿಕೊಳ್ಳಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹಿರಾತನ್ನು ಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಆಯುಕ್ತನು ಲಿಖಿತ ನೋಟೀಸಿನ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಇಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ ಆ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹಿರಾತನ್ನು ತೆಗೆದುಹಾಕುವಂತೆ ಅಥವಾ ಕೆಡವಿಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹಿರಾತನ್ನು ತೆಗೆದುಹಾಕಿಸಬಹುದು:

ಪರಂತು, ಅಧಿಕೃತ ಅಥವಾ ಅನಧಿಕೃತ ಜಾಹಿರಾತು ಶುಲ್ಕ ಮತ್ತು/ಅಥವಾ ದಂಡವನ್ನು ಪಾವತಿಸಲು ಹೊಣೆಯಾಗಿರುವ ಜಾಹಿರಾತಿನ ಸಂದರ್ಭದಲ್ಲಿ, ಆದರೆ ಅದನ್ನು ಪಾವತಿಸಲು ವಿಳಂಬವಾದರೆ, ಆತನು ಶುಲ್ಕ ಮತ್ತು/ಅಥವಾ ದಂಡದ ಜೊತೆಗೆ ಜಾಹಿರಾತು ಶುಲ್ಕ ಅಥವಾ ದಂಡವು ಬಾಕಿಯಾದ ದಿನಾಂಕದಿಂದ ಅದನ್ನು ಪಾವತಿಸುವ ದಿನಾಂಕದವರೆಗೆ ಲೆಕ್ಕಹಾಕಲಾದಂತೆ ವಾರ್ಷಿಕವಾಗಿ ಶೇಕಡಾ ಹದಿನೆಂಟರಷ್ಟು ಬಡ್ಡಿ ದರದಲ್ಲಿ ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಮತ್ತೂ ಪರಂತು, ನಿಯಮಗಳಲ್ಲಿ ನಿಯಮಿಸಬಹುದಾದಂತೆ ಯಾವುದೇ ಅನಧಿಕೃತ ಜಾಹಿರಾತು, ದಂಡ ಮತ್ತು ಜುಲ್ಮಾನೆಯನ್ನು ಸಹ ಪಾವತಿಸಲು ಹೊಣೆಯಾಗಿರತಕ್ಕದ್ದು. ಸದರಿ ದಂಡ ಅಥವಾ ಜುಲ್ಮಾನೆಯ ಪಾವತಿಯು ಅನಧಿಕೃತ ಜಾಹಿರಾತನ್ನು ಮುಂದುವರೆಸಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ ಹಾಗೂ ಅದನ್ನು ಕ್ಷಿಪ್ರವಾಗಿ ತೆಗೆದುಹಾಕತಕ್ಕದ್ದು ಅಥವಾ ಕೆಡವಿಹಾಕತಕ್ಕದ್ದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳು ಅಥವಾ ಪ್ರದರ್ಶನಗಳ ಮೇಲಿನ ಜುಲ್ಮಾನೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸ್ಥಳದಲ್ಲೇ ವಸೂಲುಮಾಡಬಹುದು.

ಅಲ್ಲದೇ ಪರಂತು, ಈ ಅಧಿನಿಯಮದಡಿಯಲ್ಲಿ ಸ್ವತ್ತು ತೆರಿಗೆಯ ಬಾಕಿಗಾಗಿ ಕಾರಣಕೇಳಿ ನೋಟೀಸನ್ನು, ತಗಾದೆ ನೋಟಿಸನ್ನು ನೀಡಲು ಮತ್ತು ವಸೂಲು ಮಾಡಲು ಉಪಬಂಧಿಸಲಾದ ವಿಧಾನದ ಪ್ರಕಾರ, ಯಥೋಚಿತ ವ್ಯತ್ಯಾಸಗಳೊಂದಿಗೆ ನಿಯಮಿಸಲಾದ ಜಾಹಿರಾತು ಶುಲ್ಕಗಳ ಅನುಸಾರವಾಗಿ ಯಾವುದೇ ಬಾಕಿಗಳನ್ನು ನಿರ್ಧರಿಸಬಹುದು ಹಾಗೂ ಅದರ ಮೇಲೆ ತಗಾದೆ ಮತ್ತು ಕಾರಣ ಕೇಳಿ ನೋಟೀಸನ್ನು ನೀಡಬಹುದು ಮತ್ತು ವಸೂಲಾತಿಗಳನ್ನು ಮಾಡಬಹುದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳಿಗಾಗಿ ಅದರ ತೆಗೆದುಹಾಕುವಿಕೆಯ ವೆಚ್ಚವನ್ನು, ಇತರ ಉಪಬಂಧಗಳೊಂದಿಗೆ, ಅನಧಿಕೃತ ಜಾಹಿರಾತು ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಮತ್ತು

ಮಾರಾಟ ಮಾಡುವ ಮೂಲಕ ಅಥವಾ ಸ್ವತ್ತು ತೆರಿಗೆಯ ಬಾಕಿಗಳನ್ನು ವಸೂಲು ಮಾಡಲು ಉಪಬಂಧಿಸಲಾದ ವಿಧಾನದಲ್ಲಿ ವಸೂಲುಮಾಡಬಹುದು."

(5) ಪ್ರಕರಣ 139ನ್ನು ಬಿಟ್ಟುಬಿಡತಕ್ಕದ್ದು.

(6) ಅನುಸೂಚಿ VIII ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**4. ತೆರಿಗೆ, ಉಪಕರ, ಶುಲ್ಕ ಮುಂತಾದವುಗಳ ವಿಧಿಸುವಿಕೆ ಮತ್ತು ಸಂಗ್ರಹಣೆಯನ್ನು ಸಿಂಧುಗೊಳಿಸುವುದು.-** ಕಟ್ಟಡ, ಖಾಲಿ ನಿವೇಶನ ಮುಂತಾದವುಗಳ ಮೇಲೆ ತೆರಿಗೆ, ಉಪಕರ,ಶುಲ್ಕ ಇತ್ಯಾದಿಯಂತೆ ಯಾವುದೇ ಮೊತ್ತವನ್ನು ತೆರಿಗೆ, ಉಪಕರ, ಶುಲ್ಕ ಇತ್ಯಾದಿಯಾಗಿ ವಸೂಲಾತಿಗೆ, ನಿರ್ಧರಣೆಗೆ ಅಥವಾ ಸಂಗ್ರಹಣೆಗೆ ವಿರುದ್ಧವಾಗಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯಗೊಂಡ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026ರ ಪ್ರಾರಂಭಕ್ಕೆ ಮೊದಲು, ಮೂಲ ಅಧಿನಿಯಮಗಳು ಅಥವಾ ಯಾವುದೇ ನಿಯಮಗಳು, ಅಧಿಸೂಚನೆ, ಆದೇಶ, ಮಾರ್ಗಸೂಚಿಗಳು ಅಥವಾ ಪತ್ರಗಳಲ್ಲಿನ ಉಪಬಂಧಗಳಡಿ ಅಂಥ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆಯ ಸಂಬಂಧದಲ್ಲಿ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ರೂಪದಲ್ಲಿ ಸಂಗ್ರಹಿಸಲಾಗಿದೆ ಎಂದು ತಾತ್ಪರ್ಯಗೊಂಡ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ಯಾವುದೇ ವಸೂಲಾತಿಯನ್ನು ಮತ್ತು ಸಂಗ್ರಹಣೆಯಲ್ಲಿ ಕೈಗೊಂಡ ಅಥವಾ ಮಾಡಲಾದ ಯಾವುದೇ ಕ್ರಮ ಅಥವಾ ಕಾರ್ಯದಲ್ಲಿ (ನೀಡಲಾದ ಯಾವುದೇ ನೋಟೀಸುಗಳು ಅಥವಾ ಆದೇಶಗಳು ಅಥವಾ ಮಾಡಲಾದ ನಿರ್ಧರಣೆಗಳನ್ನು ಒಳಗೊಂಡಂತೆ) ಮತ್ತು ಹೂಡಿದ ಎಲ್ಲಾ ವ್ಯವಹರಣೆಗಳಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026ರ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮಗಳಡಿಯಲ್ಲಿ ಮಾಡಿದ, ತೆಗೆದುಕೊಂಡ ಅಥವಾ ಕೈಗೊಂಡ ಅಂಥ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಎಂದು, ಎಲ್ಲಾ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಹಾಗೂ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ:-

(ಎ) ಸರ್ಕಾರವು ಅಥವಾ ಸಂದರ್ಭಾನುಸಾರವಾಗಿ, ಮುನ್ಸಿಪಾಲಿಟಿ ಅಥವಾ ಪಾಲಿಕೆ ಅಧಿಕಾರಿಗಳು, ಎಲ್ಲಾ ಉದ್ದೇಶಗಳಿಗಾಗಿ ಶುಲ್ಕದಂತೆ ಯಾವುದೇ ಮೊತ್ತದ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಸಂಬಂಧದಲ್ಲಿ ಕೈಗೊಂಡ ಎಲ್ಲಾ ಕ್ರಮಗಳು, ವ್ಯವಹರಣೆಗಳು ಅಥವಾ ವಿಷಯಗಳನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಯಾವಾಗಲೂ ಕಾನೂನಿಗನುಸಾರವಾಗಿ ಮಾಡಲಾಗಿದೆ, ಕೈಗೊಳ್ಳಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ಶುಲ್ಕದ ಮರುಸಂದಾಯಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು, ಯಾವುದೇ ಅಂಥ ಶುಲ್ಕದ ಮರುಸಂದಾಯವನ್ನು ನಿರ್ದೇಶಿಸಿ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದಲ್ಲ."

The above translation of the Karnataka Municipalities and Certain Other Law (Amendment) Act, 2026 (Karnataka Act 28 of 2026) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

THAMMAIAH